# ಮುಗಿಯದ ವಾಟ್ಸ್‌ಆ್ಯಪ್ ಹೊಸ ನೀತಿ ಗೊಂದಲ

■ **ಶಶಿಕುಮಾರ್ ಸಿ.**

ಫೇಸ್‌ಬುಕ್ ಜೊತೆಗೆ ತನ್ನ ಬಳಕೆದಾರರ ಮಾಹಿತಿ ಹಂಚಿಕೊಳ್ಳುವ ಸಲುವಾಗಿ ವಾಟ್ಸ್‌ಆ್ಯಪ್ ಪ್ರಕಟಿಸಿದ್ದ ತನ್ನ ಹೊಸ ನಿಯಮವನ್ನು ಅದು ಸದ್ಯ ಮೇ 15ರವರೆಗೆ ಮುಂದೂಡಿದೆ. ತನ್ನ ಹೊಸ ನೀತಿಯಿಂದ ಹಿಂದೆ ಸರಿಯುವುದಾಗಿ ಅದು ಎಲ್ಲೂ ಪ್ರಕಟಿಸಿಲ್ಲ. ಆದರೆ, ಈಚೆಗೆ ಎಲ್ಲ ಬಳಕೆದಾರರ ಸ್ಟೇಟಸ್ ಪಟ್ಟಿಯಲ್ಲಿ ವಾಟ್ಸ್‌ಆ್ಯಪ್ ಹೆಸರಿನಲ್ಲೇ ನಾಲ್ಕು ಪ್ರತ್ಯೇಕ ಸ್ಟೇಟಸ್‌ಗಳನ್ನು ಅಪ್‌ಡೇಟ್ ಮಾಡಿದೆ.

## ಸ್ಟೇಟಸ್‌ನಲ್ಲಿ ಏನಿತ್ತು?

ನಾವು ನಮ್ಮ ಬಳಕೆದಾರರ ಖಾಸಗಿತನವನ್ನು ರಕ್ಷಿಸಲು ಬದ್ಧರಾಗಿದ್ದೇವೆ, ಬಳಕೆದಾರರ ವೈಯಕ್ತಿಕ ಮಾಹಿತಿ ಹಾಗೂ ಚಾಟ್‌ಗಳು 'ಎಂಡ್ ಟು ಎಂಡ್' ಎನ್‌ಕ್ರಿಪ್ಷನ್ ಆಗಿರುವುದರಿಂದ ಅವುಗಳನ್ನು ಯಾರೂ ಓದಲು ಸಾಧ್ಯವಾಗದು, ಬಳಕೆದಾರರು ಶೇರ್ ಮಾಡಿಕೊಂಡಿರುವ ಲೋಕೇಷನ್ ಮಾಹಿತಿಯನ್ನು ವಾಟ್ಸ್‌ಆ್ಯಪ್ ನೋಡಲು ಸಾಧ್ಯವಿಲ್ಲ, ಬಳಕೆದಾರರ ಕಾಂಟ್ಯಾಕ್ಟ್ ಅನ್ನು ಫೇಸ್‌ಬುಕ್ ಜೊತೆಗೆ ಹಂಚಿಕೊಳ್ಳುವುದಿಲ್ಲ ಎಂಬ ಬರಹವುಳ್ಳ ಪ್ರತ್ಯೇಕ ಸ್ಟೇಟಸ್ ಅನ್ನು ವಾಟ್ಸ್‌ಆ್ಯಪ್ ಪೋಸ್ಟ್ ಮಾಡಿದೆ.

## ಕೇಂದ್ರ ಸರ್ಕಾರ ಮಧ್ಯಪ್ರವೇಶ

ವಾಟ್ಸ್‌ಆ್ಯಪ್ ಹೊಸ ನೀತಿಯ ಸಂಬಂಧ ಮಧ್ಯಪ್ರವೇಶಿಸಿರುವ ಕೇಂದ್ರ ಸರ್ಕಾರವು, 'ಖಾಸಗಿತನಕ್ಕೆ ಸಂಬಂಧಿಸಿದಂತೆ ವಾಟ್ಸ್‌ಆ್ಯಪ್ ನೀತಿಯಲ್ಲಿ ಇತ್ತೀಚೆಗೆ ತಂದಿರುವ ಹೊಸ ನೀತಿಗಳು ಏಕಪಕ್ಷೀಯವಾಗಿವೆ. ಅವುಗಳನ್ನು ಸ್ವೀಕರಿಸಲು ಸಾಧ್ಯವಿಲ್ಲ. ಹೀಗಾಗಿ ಹೊಸ ನೀತಿಯನ್ನು ಕೈಬಿಡಬೇಕು' ಎಂದು ವಾಟ್ಸ್‌ಆ್ಯಪ್‌ಗೆ ಸೂಚಿಸಿದೆ.

ಬಳಕೆದಾರರ ಸಮಯ, ಫ್ರಿಕ್ವೆನ್ಸಿ ಹಾಗೂ ಸಂವಹನದ ಅವಧಿ, ಗ್ರೂಪ್‌ನ ಹೆಸರು, ಪಾವತಿ ಮತ್ತು ವಹಿವಾಟಿನ ಮಾಹಿತಿಗಳು, ಆನ್‌ಲೈನ್ ಸ್ಟೇಟಸ್, ಲೋಕೇಷನ್ ಇಂಡಿಕೇಟರ್ಸ್ ಹಾಗೂ ಬಿಸಿನೆಸ್ ಅಕೌಂಟ್ ಜೊತೆಗೆ ಹಂಚಿಕೊಂಡ ಯಾವುದೇ ಮೆಸೇಜ್ ಅನ್ನು ಸಂಗ್ರಹಿಸಲು ವಾಟ್ಸ್‌ಆ್ಯಪ್‌ನ ಹೊಸ ನೀತಿಯು ಅವಕಾಶವನ್ನು ಕಲ್ಪಿಸಿಕೊಡುತ್ತದೆ.

## ಮಾಹಿತಿ ಕೋರಿದ ಸಚಿವಾಲಯ

ಭಾರತದಲ್ಲಿ ಸೇವೆ ಒದಗಿಸುತ್ತಿರುವ ವಾಟ್ಸ್‌ಆ್ಯಪ್ ತನ್ನ ಬಳಕೆದಾರರಿಂದ ಯಾವೆಲ್ಲ ದತ್ತಾಂಶಗಳನ್ನು ಸಂಗ್ರಹಿಸುತ್ತಿದೆ, ಅದಕ್ಕೆ ಅನುಮತಿಯನ್ನು ಪಡೆಯಲಾಗಿದೆಯೇ, ಬಳಕೆದಾರರನ್ನು ಬಳಕೆಯ ಮಾಹಿತಿಯ ಆಧಾರದ ಮೇಲೆ ವರ್ಗೀಕರಣ ಮಾಡಲಾಗುತ್ತಿದೆಯೇ, ಭಾರತ ಹಾಗೂ ಇತರೆ ದೇಶಗಳ ಖಾಸಗೀತನ ನೀತಿಯಲ್ಲಿ ಇರುವಂತಹ ವ್ಯತ್ಯಾಸಗಳೇನು ಎಂಬ ವಿವರವನ್ನು ಸಚಿವಾಲಯವು ಕೋರಿದೆ.

## ಹೈಕೋರ್ಟ್ ಸಲಹೆ

ಹೊಸ ನೀತಿಯ ಗೊಂದಲವು ಕೋರ್ಟ್ ಮೆಟ್ಟಿಲೂ ಏರಿದ್ದು, 'ಬಳಕೆದಾರರಿಗೆ ಸಮ್ಮತಿ ಇಲ್ಲವಾದರೆ ವಾಟ್ಸ್‌ಆ್ಯಪ್ ಅನ್ನು ಬಳಸದಿರಿ' ಎಂದು ದೆಹಲಿ ಹೈಕೋರ್ಟ್ ಸಲಹೆ ನೀಡಿದೆ. 'ವಾಟ್ಸ್‌ಆ್ಯಪ್ ಒಂದು ಖಾಸಗಿ ಮೊಬೈಲ್ ಆ್ಯಪ್. ಇದರ ಹೊಸ ನೀತಿಯನ್ನು ನೀವು ತಿರಸ್ಕರಿಸಲೂಬಹುದು. ಹೊಸ ನೀತಿಯನ್ನು ಒಪ್ಪಿಕೊಳ್ಳದಿದ್ದರೆ ಆ ಆ್ಯಪ್ ಅನ್ನು ಬಳಸಬೇಡಿ. ಅದರ ಸೂಚನೆಯನ್ನು ತಿರಸ್ಕರಿಸಿ, ಬೇರೆ ಖಾಸಗಿ ಮೆಸೇಜಿಂಗ್ ಮೊಬೈಲ್ ಆ್ಯಪ್ ಅನ್ನು ಬಳಸಿ' ಎಂದು ನ್ಯಾಯಮೂರ್ತಿ ಸಂಜೀವ್ ಸಚ್‌ದೇವ್ ಅವರು ಹೊಸ ನೀತಿ ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದ ವಕೀಲರಿಗೆ ತಿಳಿಸಿದ್ದಾರೆ. ■


